INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -05,September-October, 2026
Page No,103-113
Peer -Reviewed, Refereed Journal

# ರಾಷ್ಟ್ರ ನಿರ್ಮಾಣದಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ಪಾತ್ರ ಕುರಿತ ವಿಮರ್ಶಾತ್ಮಕ ವಿಶ್ಲೇಷಣೆ

**ಡಾ.ವಿ.ಎಂ. ರಮೇಶ.**[1]

**ಸಾರಾಂಶ:** ಭಾರತ ದೇಶವನ್ನು ನಿರ್ಮಾಣಮಾಡುವಂತಹ ಪ್ರಕ್ರಿಯೆಯಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ಚಿಂತನೆ ಹಾಗೂ ರಚನಾತ್ಮಕ ಕಾರ್ಯಗಳು ವಿಶಿಷ್ಟವಾದ ಸ್ಥಾನವನ್ನು ಹೊಂದಿರುತ್ತವೆ. ಇಬ್ಬರೂ ವಿಭಿನ್ನ ಸಾಮಾಜಿಕ, ರಾಜಕೀಯ ಮತ್ತು ವೈಚಾರಿಕ ಹಿನ್ನೆಲೆಯಿಂದ ಬಂದಿದ್ದರೂ, ಭಾರತೀಯ ಸಮಾಜವನ್ನು ಪರಿವರ್ತಿಸುವುದು, ಶೋಷಿತ ಮತ್ತು ಹಿಂದುಳಿದ ಜನಸಮುದಾಯಗಳ ಸ್ಥಿತಿಯನ್ನು ಸುಧಾರಿಸುವುದು ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಭವಿಷ್ಯಕ್ಕೆ ಒಂದು ನೈತಿಕ ಮತ್ತು ಪ್ರಜಾಸತ್ತಾತ್ಮಕ ನೆಲೆಯನ್ನು ರೂಪಿಸುವುದು ಅವರ ಚಿಂತನೆಯ ಪ್ರಮುಖ ಆಯಾಮಗಳಾಗಿವೆ. ಗಾಂಧೀಜಿ ಅವರ ರಾಷ್ಟ್ರ ನಿರ್ಮಾಣದ ಪರಿಕಲ್ಪನೆಯು ಸ್ವರಾಜ್ಯ, ಸತ್ಯ, ಅಹಿಂಸೆ, ಸರ್ವೋದಯ, ಗ್ರಾಮಸ್ವರಾಜ್ಯ, ಸ್ವದೇಶಿ, ಸಾಮಾಜಿಕ ಸೌಹಾರ್ದ ಮತ್ತು ನೈತಿಕ ರಾಜಕೀಯದ ಮೇಲೆ ಕೇಂದ್ರೀಕೃತವಾಗಿದ್ದರೆ, ಅಂಬೇಡ್ಕರ್ ಅವರ ರಾಷ್ಟ್ರ ನಿರ್ಮಾಣದ ದೃಷ್ಟಿಕೋನವು ಸಾಮಾಜಿಕ ನ್ಯಾಯ, ಸಮಾನತೆ, ವೈಯಕ್ತಿಕ ಸ್ವಾತಂತ್ರ್ಯ, ಸಾಂವಿಧಾನಾತ್ಮಕ ಪ್ರಜಾಪ್ರಭುತ್ವ, ಕಾನೂನಿನ ಆಳ್ವಿಕೆ ಮತ್ತು ಸಾಮಾಜಿಕ ಪ್ರಜಾಪ್ರಭುತ್ವದ ಮೇಲೆ ಆಧಾರಿತವಾಗಿತ್ತು. ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಆರ್ಥಿಕ ಅಸಮಾನತೆ, ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ರಾಜಕೀಯ ಪ್ರಾತಿನಿಧ್ಯದ ಪ್ರಶ್ನೆಗಳಲ್ಲಿ ಇಬ್ಬರ ವಿಧಾನಗಳಲ್ಲಿ ಗಮನಾರ್ಹ ವ್ಯತ್ಯಾಸಗಳಿದ್ದವು. ಆದ್ದರಿಂದಲೇ ಪ್ರಸ್ತುತ ರಾಷ್ಟ್ರ ನಿರ್ಮಾಣದ ಹಿನ್ನೆಲೆಯಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ಚಿಂತನೆ ಹಾಗೂ ಕೊಡುಗೆಗಳನ್ನು ತುಲನಾತ್ಮಕ ಮತ್ತು ವಿಮರ್ಶಾತ್ಮಕ ನೆಲೆಯಲ್ಲಿ ವಿಶ್ಲೇಷಿಸುತ್ತದೆ. ಇವರಿಬ್ಬರ ಚಿಂತನೆಗಳಲ್ಲಿನ ಸಾಮ್ಯತೆ ಮತ್ತು ಭಿನ್ನತೆಗಳನ್ನು ಅರ್ಥೈಸುವುದರ ಮೂಲಕ ಆಧುನಿಕ ಭಾರತದ ರಾಷ್ಟ್ರ ನಿರ್ಮಾಣದಲ್ಲಿ ಸಾಮಾಜಿಕ ನ್ಯಾಯ, ರಾಜಕೀಯ ಸ್ವಾತಂತ್ರ್ಯ, ಸಮಾನತೆ ಮತ್ತು ನೈತಿಕತೆಯ ಪರಸ್ಪರ ಸಂಬಂಧವನ್ನು ಗುರುತಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿರುತ್ತದೆ.

**1.ಸಹಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ಮತ್ತು ಸಂಶೋಧನೆ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು–06**

**ಪ್ರಧಾನ ಪದಗಳು: ರಾಷ್ಟ್ರ ನಿರ್ಮಾಣ, ಅಂಬೇಡ್ಕರ್, ಗಾಂಧೀಜಿ, ಸಾಮಾಜಿಕ ನ್ಯಾಯ, ಸಂವಿಧಾನ, ಪ್ರಜಾಪ್ರಭುತ್ವ, ಸ್ವರಾಜ್ಯ, ಸರ್ವೋದಯ, ಸಮಾನತೆ, ಅಹಿಂಸೆ.**

**ಪೀಠಿಕೆ:** ರಾಷ್ಟ್ರ ನಿರ್ಮಾಣವೆಂಬುದು ಕೇವಲ ಭೌಗೋಳಿಕ ಗಡಿಗಳು, ರಾಜಕೀಯ ಸ್ವಾತಂತ್ರ್ಯ ಅಥವಾ ಆಡಳಿತ ವ್ಯವಸ್ಥೆಯ ನಿರ್ಮಾಣಕ್ಕೆ ಸೀಮಿತವಾಗಿರುವ ಪ್ರಕ್ರಿಯೆಯಲ್ಲ. ಅದು ಒಂದು ಸಮಾಜದ ವಿವಿಧ ಜನವರ್ಗಗಳು, ಜಾತಿಗಳು, ಧರ್ಮಗಳು, ಭಾಷೆಗಳು ಮತ್ತು ಸಾಂಸ್ಕೃತಿಕ ಸಮುದಾಯಗಳನ್ನು ಸಮಾನತೆ, ನ್ಯಾಯ, ಸ್ವಾತಂತ್ರ್ಯ ಮತ್ತು ಸಹಬಾಳ್ವೆಯ ಸಾಮಾನ್ಯ ಮೌಲ್ಯಗಳ ಅಡಿಯಲ್ಲಿ ಒಗ್ಗೂಡಿಸುವ ನಿರಂತರ ಪ್ರಕ್ರಿಯೆಯಾಗಿದೆ. ಭಾರತ ದೇಶದಂತಹ ಬಹುಸಾಂಸ್ಕೃತಿಕ ಮತ್ತು ಬಹುಸಾಮಾಜಿಕ ರಾಷ್ಟ್ರದಲ್ಲಿ ರಾಷ್ಟ್ರ ನಿರ್ಮಾಣದ ಪ್ರಶ್ನೆಯು ಸಾಮಾಜಿಕ ಸುಧಾರಣೆ, ರಾಜಕೀಯ ಸ್ವಾತಂತ್ರ್ಯ, ಆರ್ಥಿಕ ಅಭಿವೃದ್ಧಿ ಮತ್ತು ಸಾಂವಿಧಾನಾತ್ಮಕ ವ್ಯವಸ್ಥೆಯೊಂದಿಗೆ ನೇರವಾಗಿ ಸಂಬಂಧಿಸಿದೆ. ಭಾರತೀಯ ರಾಷ್ಟ್ರ ನಿರ್ಮಾಣದ ಆಧುನಿಕ ಇತಿಹಾಸದಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್ ಅವರಿಬ್ಬರೂ ಅತ್ಯಂತ ಪ್ರಭಾವಶಾಲಿ ಚಿಂತಕರಾಗಿದ್ದಾರೆ. ಗಾಂಧೀಜಿ ಅವರು ಭಾರತೀಯ ಸ್ವಾತಂತ್ರ್ಯ ಚಳವಳಿಯನ್ನು ಜನಸಾಮಾನ್ಯರೊಂದಿಗೆ ವ್ಯಾಪಕವಾಗಿ ಸಂಪರ್ಕಿಸಿದ ನಾಯಕನಾಗಿ, ಸ್ವರಾಜ್ಯವನ್ನು ನೈತಿಕ ಮತ್ತು ಸಾಮಾಜಿಕ ಪುನರ್‌ನಿರ್ಮಾಣದೊಂದಿಗೆ ಜೋಡಿಸಿದರು. ಅಂಬೇಡ್ಕರ್ ಅವರು ಸಾಮಾಜಿಕವಾಗಿ ಶೋಷಿತ ಜನಸಮುದಾಯಗಳ ಹಕ್ಕುಗಳನ್ನು ರಾಜಕೀಯ ಮತ್ತು ಸಾಂವಿಧಾನಾತ್ಮಕ ವ್ಯವಸ್ಥೆಯ ಕೇಂದ್ರದಲ್ಲಿ ಸ್ಥಾಪಿಸುವ ಪ್ರಯತ್ನ ಮಾಡಿದರು. ಗಾಂಧೀಜಿ ಅವರ ರಾಷ್ಟ್ರ ನಿರ್ಮಾಣದ ಚಿಂತನೆಯು ಜನಚಳವಳಿ ಮತ್ತು ನೈತಿಕ ಪರಿವರ್ತನೆಯ ಮೂಲಕ ಸಮಾಜವನ್ನು ಬದಲಿಸುವ ಪ್ರಯತ್ನವಾಗಿದ್ದರೆ, ಅಂಬೇಡ್ಕರ್ ಅವರ ದೃಷ್ಟಿಕೋನವು ಕಾನೂನು, ಸಂವಿಧಾನ, ಪ್ರಾತಿನಿಧ್ಯ ಮತ್ತು ಸಂಸ್ಥಾತ್ಮಕ ಸುಧಾರಣೆಗಳ ಮೂಲಕ ಸಮಾನತೆಯ ಸಮಾಜವನ್ನು ನಿರ್ಮಿಸುವ ಪ್ರಯತ್ನವಾಗಿತ್ತು.

**ಅಧ್ಯಯನದ ಉದ್ದೇಶಗಳು**

- ರಾಷ್ಟ್ರ ನಿರ್ಮಾಣದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ಚಿಂತನೆಗಳನ್ನು ಪರಿಚಯಿಸುವುದು.
- ಭಾರತದ ರಾಷ್ಟ್ರ ನಿರ್ಮಾಣದಲ್ಲಿ ಗಾಂಧೀಜಿ ಅವರ ಸಮಾಜೋ–ರಾಜಕೀಯ, ನೈತಿಕತೆ ಮತ್ತು ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ, ಸಾಂವಿಧಾನಾತ್ಮಕ ಪ್ರಜಾಪ್ರಭುತ್ವದ ಕೊಡುಗೆಯನ್ನು ಪರಿಶೀಲಿಸುವುದು.
- ಜಾತಿ, ಅಸ್ಪೃಶ್ಯತೆ, ಸಮಾನತೆ, ಸ್ವರಾಜ್ಯ ಮತ್ತು ಸಾಮಾಜಿಕ ನ್ಯಾಯದ ಕುರಿತು ಇವರಿಬ್ಬರ ನಿಲುವುಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡುವುದು.

- ಸಮಕಾಲೀನ ಭಾರತದ ರಾಷ್ಟ್ರ ನಿರ್ಮಾಣದ ಸಂದರ್ಭದಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ಚಿಂತನೆಗಳ ಪ್ರಸ್ತುತತೆಯನ್ನು ವಿಮರ್ಶಾತ್ಮಕವಾಗಿ ಗುರುತಿಸುವುದು.

**ಅಧ್ಯಯನದ ವಿಧಾನ:** ಪ್ರಸ್ತುತ ಅಧ್ಯಯನವು ಐತಿಹಾಸಿಕ, ವಿವರಣಾತ್ಮಕ, ವಿಶ್ಲೇಷಣಾತ್ಮಕ, ಅವಲೋಕನ ಮತ್ತು ತುಲನಾತ್ಮಕ ವಿಧಾನಗಳನ್ನು ಆಧರಿಸಿರುತ್ತದೆ. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಮೂಲ ಕೃತಿಗಳು, ಭಾಷಣಗಳು, ಲೇಖನಗಳು, ಸಂವಿಧಾನ ರಚನಾ ಸಭೆಯ ಚರ್ಚೆಗಳು ಹಾಗೂ ಅವರ ಕುರಿತು ಪ್ರಕಟವಾದ ಸಂಶೋಧನಾ ಕೃತಿಗಳನ್ನು ಅಧ್ಯಯನಕ್ಕೆ ಆಧಾರವನ್ನಾಗಿ ಪರಿಗಣಿಸಲಾಗಿದೆ. ರಾಷ್ಟ್ರ ನಿರ್ಮಾಣ, ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ, ಸ್ವರಾಜ್ಯ, ಜಾತಿ ನಿರ್ಮೂಲನೆ ಮತ್ತು ಸಾಂವಿಧಾನಾತ್ಮಕತೆಯಂತಹ ಪರಿಕಲ್ಪನೆಗಳ ಆಧಾರದ ಮೇಲೆ ಇಬ್ಬರ ಚಿಂತನೆಗಳನ್ನು ವಿಶ್ಲೇಷಿಸಲಾಗಿದೆ.

**ರಾಷ್ಟ್ರ ನಿರ್ಮಾಣದ ಪರಿಕಲ್ಪನೆ:** ರಾಷ್ಟ್ರ ನಿರ್ಮಾಣವು ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಪೂರ್ಣಗೊಳ್ಳುವ ಕಾರ್ಯವಲ್ಲ; ಬದಲಾಗಿ, ರಾಜಕೀಯ ಸ್ವಾತಂತ್ರ್ಯವನ್ನು ಸಾಮಾಜಿಕ ಸಮಾನತೆ, ಆರ್ಥಿಕ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳೊಂದಿಗೆ ಸಮನ್ವಯಗೊಳಿಸುವ ಮೂಲಕ ರಾಷ್ಟ್ರವನ್ನು ನಿರಂತರವಾಗಿ ಪುನರ್‌ನಿರ್ಮಿಸುವ ಬಹುಮುಖ ಪ್ರಕ್ರಿಯೆಯಾಗಿದೆ. ಅದರಲ್ಲಿಯೂ ವಿಶೇಷವಾಗಿ ಭಾರತದಂತಹ ಬಹುಜಾತಿ, ಬಹುಧರ್ಮ, ಬಹುಭಾಷೆ ಮತ್ತು ಬಹುಸಾಂಸ್ಕೃತಿಕ ಸಮಾಜದಲ್ಲಿ ರಾಷ್ಟ್ರ ನಿರ್ಮಾಣವು ಕೇವಲ ವಸಾಹತುಶಾಹಿ ಆಡಳಿತದಿಂದ ರಾಜಕೀಯ ಬಿಡುಗಡೆಯನ್ನು ಸಾಧಿಸುವುದಕ್ಕೆ ಸೀಮಿತವಾಗದೆ, ಸಮಾನತೆ, ಸಾಮಾಜಿಕ ನ್ಯಾಯ, ನಾಗರಿಕ ಹಕ್ಕುಗಳು ಮತ್ತು ಆರ್ಥಿಕ ಅವಕಾಶಗಳ ವಿಸ್ತರಣೆಯೊಂದಿಗೆ ಸಂಬಂಧ ಹೊಂದಿದೆ. ಭಾರತೀಯ ಸಂದರ್ಭದಲ್ಲಿ ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯನ್ನು ಮುಖ್ಯವಾಗಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಎಂಬ ಮೂರು ಪರಸ್ಪರ ಸಂಬಂಧಿತ ಆಯಾಮಗಳಲ್ಲಿ ಗುರುತಿಸಬಹುದು. ರಾಜಕೀಯ ರಾಷ್ಟ್ರ ನಿರ್ಮಾಣವು ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಾಂವಿಧಾನಾತ್ಮಕ ಆಡಳಿತ, ಕಾನೂನಿನ ಆಳ್ವಿಕೆ ಹಾಗೂ ನಾಗರಿಕರ ಸಕ್ರಿಯ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಒಳಗೊಂಡಿದೆ. ಸಾಮಾಜಿಕ ರಾಷ್ಟ್ರ ನಿರ್ಮಾಣವು ಜಾತಿ, ಅಸ್ಪೃಶ್ಯತೆ, ಲಿಂಗಭೇದ, ಸಾಮಾಜಿಕ ಶ್ರೇಣೀಕರಣ ಮತ್ತು ಇತರ ಅಸಮಾನತೆಗಳನ್ನು ನಿವಾರಿಸಿ ಸಮಾನ ನಾಗರಿಕತ್ವ ಹಾಗೂ ಮಾನವ ಗೌರವವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ. ಅದೇ ರೀತಿಯಲ್ಲಿ ಆರ್ಥಿಕ ರಾಷ್ಟ್ರ ನಿರ್ಮಾಣವು ಬಡತನ ನಿವಾರಣೆ, ಉದ್ಯೋಗ ಸೃಷ್ಟಿ, ಶಿಕ್ಷಣ ಮತ್ತು ಆರೋಗ್ಯದಂತಹ ಮೂಲಭೂತ ಸೌಲಭ್ಯಗಳ ವಿಸ್ತರಣೆ, ಸಂಪನ್ಮೂಲಗಳ ನ್ಯಾಯಸಮ್ಮತ ಹಂಚಿಕೆ ಹಾಗೂ ದುರ್ಬಲ ಮತ್ತು ಅಂಚಿನ ಜನಸಮುದಾಯಗಳ ಆರ್ಥಿಕ ಸಬಲೀಕರಣಕ್ಕೆ ಸಂಬಂಧಿಸಿದೆ. ರಾಜಕೀಯ ಸ್ವಾತಂತ್ರ್ಯಕ್ಕೆ ಸಾಮಾಜಿಕ ಸಮಾನತೆ ಮತ್ತು ಆರ್ಥಿಕ ನ್ಯಾಯವನ್ನು ಸಂಯೋಜಿಸಿ, ಎಲ್ಲ ಜನವರ್ಗಗಳಿಗೂ ಸಮಾನ ಅವಕಾಶ,

ಹಕ್ಕು ಮತ್ತು ಗೌರವವನ್ನು ಖಾತ್ರಿಪಡಿಸುವ ನಿರಂತರ ಪ್ರಕ್ರಿಯೆಯೇ ಸಮಗ್ರ ರಾಷ್ಟ್ರ ನಿರ್ಮಾಣದ ಮೂಲಾಧಾರವಾಗಿರುತ್ತದೆ.

**ಗಾಂಧೀಜಿ ಅವರ ಪರಿಕಲ್ಪನೆಯ ರಾಷ್ಟ್ರ ನಿರ್ಮಾಣ**

**ಸ್ವರಾಜ್ಯದ ಪರಿಕಲ್ಪನೆ:** ಗಾಂಧೀಜಿ ಅವರ ರಾಷ್ಟ್ರ ನಿರ್ಮಾಣದ ಚಿಂತನೆಯ ಕೇಂದ್ರಬಿಂದುವಾಗಿ ಸ್ವರಾಜ್ಯದ ಪರಿಕಲ್ಪನೆ ಪ್ರಮುಖ ಸ್ಥಾನವನ್ನು ಪಡೆದಿರುತ್ತದೆ. ಅವರ ದೃಷ್ಟಿಯಲ್ಲಿ ಸ್ವರಾಜ್ಯವೆಂದರೆ; ಕೇವಲ ವಿದೇಶಿ ಆಡಳಿತದಿಂದ ರಾಜಕೀಯ ಮುಕ್ತಿಯನ್ನು ಪಡೆಯುವುದಕ್ಕೆ ಸೀಮಿತವಾದ ಪರಿಕಲ್ಪನೆಯಲ್ಲ; ಬದಲಾಗಿ, ವ್ಯಕ್ತಿ, ಸಮಾಜ ಮತ್ತು ರಾಷ್ಟ್ರವು ತನ್ನದೇ ಆದ ನೈತಿಕ ವಿವೇಕ, ಆತ್ಮನಿಯಂತ್ರಣ, ಹೊಣೆಗಾರಿಕೆ ಮತ್ತು ಸ್ವಾವಲಂಬನೆಯ ಆಧಾರದ ಮೇಲೆ ಬದುಕುವ ವ್ಯವಸ್ಥೆಯಾಗಿದೆ. ಗಾಂಧೀಜಿ ಅವರ ರಾಜಕೀಯ ಸ್ವಾತಂತ್ರ್ಯವನ್ನು ಸಾಮಾಜಿಕ ಮತ್ತು ನೈತಿಕ ಪುನರ್‌ನಿರ್ಮಾಣದೊಂದಿಗೆ ಅವಿನಾಭಾವವಾಗಿ ಜೋಡಿಸಿದರು. ಅವರ ಪ್ರಕಾರ, ವಿದೇಶಿ ಆಡಳಿತದ ಅಂತ್ಯವು ಸ್ವರಾಜ್ಯದ ಅಂತಿಮ ಗುರಿಯಾಗದೆ, ವ್ಯಕ್ತಿ ಮತ್ತು ಸಮಾಜದೊಳಗೆ ಸ್ವಯಂಶಿಸ್ತು, ನೈತಿಕ ಪ್ರಜ್ಞೆ ಹಾಗೂ ಸಾಮಾಜಿಕ ಹೊಣೆಗಾರಿಕೆ ಬೆಳೆಯುವುದೇ ನಿಜವಾದ ಸ್ವರಾಜ್ಯದ ಲಕ್ಷಣವಾಗಿದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಅವರ ಸ್ವರಾಜ್ಯದ ಪರಿಕಲ್ಪನೆಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯ, ಆತ್ಮನಿಯಂತ್ರಣ, ಸಾಮಾಜಿಕ ಹೊಣೆಗಾರಿಕೆ, ಸ್ವಾವಲಂಬನೆ, ಗ್ರಾಮಸ್ವರಾಜ್ಯ, ಜನಸಹಭಾಗಿತ್ವ ಮತ್ತು ನೈತಿಕ ರಾಜಕೀಯಗಳಿಗೆ ವಿಶೇಷ ಮಹತ್ವ ದೊರೆಯುತ್ತದೆ.

**ಸತ್ಯ ಮತ್ತು ಅಹಿಂಸೆ:** ಗಾಂಧೀಜಿ ಅವರ ರಾಜಕೀಯ ಚಿಂತನೆಯ ಮೂಲಭೂತ ಹಾಗೂ ಪರಸ್ಪರ ಪೂರಕವಾದ ಅಂಶಗಳಾಗಿ ಸತ್ಯ ಮತ್ತು ಅಹಿಂಸೆ ಪ್ರಮುಖ ಸ್ಥಾನವನ್ನು ಪಡೆದಿರುತ್ತವೆ. ಅವರ ದೃಷ್ಟಿಯಲ್ಲಿ ಸತ್ಯವು ಜೀವನದ ಪರಮ ಮೌಲ್ಯವಾಗಿದ್ದು, ಅಹಿಂಸೆಯು ಸತ್ಯದ ಅನ್ವೇಷಣೆ ಮತ್ತು ಸಾಧನೆಗೆ ಅನುಸರಿಸಬೇಕಾದ ಪ್ರಮುಖ ಮಾರ್ಗವಾಗಿದೆ. ಆದ್ದರಿಂದಲೇ ರಾಜಕೀಯ ಗುರಿ ಮತ್ತು ಅದನ್ನು ಸಾಧಿಸಲು ಬಳಸುವ ಸಾಧನಗಳು ಪರಸ್ಪರ ಸಂಬಂಧ ಹೊಂದಿರಬೇಕು ಎಂಬುದು ಅವರ ದೃಢವಾದ ನಿಲುವಾಗಿತ್ತು. ನ್ಯಾಯಯುತವಾದ ಗುರಿಯನ್ನು ಅನ್ಯಾಯಯುತ ಅಥವಾ ಹಿಂಸಾತ್ಮಕ ಸಾಧನಗಳ ಮೂಲಕ ಸಾಧಿಸುವುದು ಸಮರ್ಥನೀಯವಲ್ಲವೆಂದು ಅವರು ಪ್ರತಿಪಾದಿಸಿದರು. ಈ ಹಿನ್ನೆಲೆಯಲ್ಲಿ ಅನ್ಯಾಯ, ಶೋಷಣೆ ಮತ್ತು ದಮನದ ವಿರುದ್ಧ ಹೋರಾಡುವ ಸಂದರ್ಭದಲ್ಲಿ ಹಿಂಸೆಯನ್ನು ಆಶ್ರಯಿಸದೆ ಸತ್ಯಾಗ್ರಹ, ಅಹಿಂಸೆ, ಅಸಹಕಾರ ಮತ್ತು ನಾಗರಿಕ ಅಸಹಕಾರಗಳಂತಹ ವಿಧಾನಗಳನ್ನು ಅವರು ರಾಜಕೀಯ ಪ್ರತಿರೋಧದ ಸಾಧನಗಳಾಗಿ ಬಳಸಿದರು. ಸತ್ಯಾಗ್ರಹವು ಕೇವಲ ಆಡಳಿತದ ವಿರುದ್ಧದ ಪ್ರತಿಭಟನೆಯ ವಿಧಾನವಾಗಿರದೆ, ಸತ್ಯ ಮತ್ತು ನೈತಿಕತೆಯ ಆಧಾರದ ಮೇಲೆ ಅನ್ಯಾಯವನ್ನು ಎದುರಿಸುವ ಜನಪರ ಹೋರಾಟದ ರೂಪವಾಗಿತ್ತು. ಇದರ ಮೂಲಕ ಗಾಂಧೀಜಿ

ಅವರು ಸಾಮಾನ್ಯ ಜನರನ್ನು ಸ್ವಾತಂತ್ರ್ಯ ಚಳವಳಿಯ ಸಕ್ರಿಯ ಭಾಗವನ್ನಾಗಿ ಮಾಡಿದರು. ರೈತರು, ಕಾರ್ಮಿಕರು, ಮಹಿಳೆಯರು ಹಾಗೂ ವಿವಿಧ ಸಾಮಾಜಿಕ ಜನವರ್ಗಗಳ ಜನರು ರಾಷ್ಟ್ರೀಯ ಚಳವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡುವಲ್ಲಿ ಸತ್ಯಾಗ್ರಹದ ವಿಧಾನವು ಪ್ರಮುಖ ಪಾತ್ರವಹಿಸಿತು.

**ಗ್ರಾಮ ಸ್ವರಾಜ್ಯ:** ಗಾಂಧೀಜಿ ಅವರ ರಾಷ್ಟ್ರ ನಿರ್ಮಾಣದ ಚಿಂತನೆಗಳಲ್ಲಿ ಗ್ರಾಮ ಸ್ವರಾಜ್ಯದ ಪರಿಕಲ್ಪನೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಭಾರತದ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೂಲಾಧಾರ ಗ್ರಾಮೀಣ ಸಮಾಜವಾಗಿದ್ದು, ದೇಶದ ನಿಜವಾದ ಶಕ್ತಿ ಗ್ರಾಮಗಳಲ್ಲಿ ನೆಲೆಗೊಂಡಿದೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಪ್ರತಿಪಾದಿಸಿದರು. ಅವರ ದೃಷ್ಟಿಯಲ್ಲಿ ಗ್ರಾಮವು ಕೇವಲ ಆಡಳಿತದ ಒಂದು ಘಟಕವಾಗಿರದೆ, ಸ್ವಯಂಪೂರ್ಣ, ಸ್ವಾವಲಂಬಿ, ಸಮಾನತಾಧಾರಿತ ಮತ್ತು ಜನಸಹಭಾಗಿತ್ವದ ಸಾಮಾಜಿಕ ಘಟಕವಾಗಿರಬೇಕು. ಸ್ಥಳೀಯ ಸ್ವಯಂ–ಆಡಳಿತ, ಗ್ರಾಮೀಣ ಸ್ವಾವಲಂಬನೆ, ಕೃಷಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ, ಸ್ಥಳೀಯ ಉತ್ಪಾದನೆ ಮತ್ತು ಬಳಕೆ, ಉದ್ಯೋಗ ಸೃಷ್ಟಿ, ಸಾಮಾಜಿಕ ಸಹಕಾರ ಹಾಗೂ ಜನರ ಸಕ್ರಿಯ ಪಾಲ್ಗೊಳ್ಳುವಿಕೆಗಳು ಗ್ರಾಮ–ಸ್ವರಾಜ್ಯದ ಪ್ರಮುಖ ಅಂಶಗಳಾಗಿರುತ್ತವೆ. ಗ್ರಾಮಗಳ ಆಡಳಿತ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ನಿರ್ಧಾರಗಳನ್ನು ಸ್ಥಳೀಯ ಜನರೇ ಕೈಗೊಳ್ಳುವ ಮೂಲಕ ಪ್ರಜಾಪ್ರಭುತ್ವವನ್ನು ತಳಮಟ್ಟದಿಂದ ಬಲಪಡಿಸಬೇಕು ಎಂಬುದು ಗಾಂಧೀಜಿ ಅವರ ಆಶಯವಾಗಿತ್ತು. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಗ್ರಾಮ–ಸ್ವರಾಜ್ಯವು ಅಧಿಕಾರದ ಕೇಂದ್ರೀಕರಣಕ್ಕೆ ಪರ್ಯಾಯವಾಗಿ ವಿಕೇಂದ್ರೀಕರಣ ಮತ್ತು ಜನಸಹಭಾಗಿತ್ವಕ್ಕೆ ಆದ್ಯತೆ ನೀಡುತ್ತದೆ. ರಾಷ್ಟ್ರದ ಅಭಿವೃದ್ಧಿಯು ಕೇವಲ ನಗರಕೇಂದ್ರಿತ ಕೈಗಾರಿಕಾ ಬೆಳವಣಿಗೆಯಿಂದ ಸಾಧ್ಯವಾಗುವುದಿಲ್ಲ; ಗ್ರಾಮೀಣ ಜನರ ಜೀವನಮಟ್ಟ, ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಸಬಲೀಕರಣವೂ ರಾಷ್ಟ್ರದ ಸಮಗ್ರ ಪ್ರಗತಿಯ ಅವಿಭಾಜ್ಯ ಭಾಗಗಳಾಗಿವೆ ಎಂಬುದು ಅವರ ನಿಲುವಾಗಿತ್ತು. ಆದ್ದರಿಂದಲೇ ಗಾಂಧೀಜಿ ಅವರ ದೃಷ್ಟಿಯಲ್ಲಿ ರಾಷ್ಟ್ರ ನಿರ್ಮಾಣವು ಮೇಲಿನಿಂದ ಕೆಳಕ್ಕೆ ಜಾರಿಗೊಳಿಸುವ ಆಡಳಿತಾತ್ಮಕ ಪ್ರಕ್ರಿಯೆಯಾಗಿರದೆ, ಗ್ರಾಮ ಮತ್ತು ಸ್ಥಳೀಯ ಜನಸಮುದಾಯಗಳ ಸಕ್ರಿಯ ಭಾಗವಹಿಸುವಿಕೆಯ ಮೂಲಕ ಕೆಳಮಟ್ಟದಿಂದ ಮೇಲಕ್ಕೆ ರೂಪುಗೊಳ್ಳುವ ಜನಕೇಂದ್ರಿತ ಪ್ರಜಾಪ್ರಭುತ್ವದ ಪ್ರಕ್ರಿಯೆಯಾಗಿದೆ.

**ಸರ್ವೋದಯ:** ಗಾಂಧೀಜಿ ಅವರ ರಾಷ್ಟ್ರ ನಿರ್ಮಾಣದ ಚಿಂತನೆಗೆ ಸರ್ವೋದಯ ಮತ್ತೊಂದು ಪ್ರಮುಖ ಆಧಾರವಾಗಿರುತ್ತದೆ. ಸಮಾಜದ ಎಲ್ಲರ ಅಭಿವೃದ್ಧಿಯೊಂದಿಗೆ ದುರ್ಬಲರು ಮತ್ತು ಹಿಂದುಳಿದವರ ಕಲ್ಯಾಣಕ್ಕೂ ಆದ್ಯತೆ ನೀಡುವುದು ಸರ್ವೋದಯದ ಮೂಲ ಆಶಯವಾಗಿತ್ತು. ಅವರ ದೃಷ್ಟಿಯಲ್ಲಿ ರಾಷ್ಟ್ರದ ಅಭಿವೃದ್ಧಿಯನ್ನು ಕೇವಲ ಆರ್ಥಿಕ ಉತ್ಪಾದನೆಯ ಪ್ರಮಾಣದಿಂದ

ಅಳೆಯಲಾಗುವುದಿಲ್ಲ. ಸಮಾಜದ ಕೊನೆಯ ವ್ಯಕ್ತಿಯ ಬದುಕಿನಲ್ಲಿ ಸುಧಾರಣೆ ಉಂಟಾದಾಗ ಮಾತ್ರ ಅಭಿವೃದ್ಧಿಗೆ ನೈತಿಕ ಅರ್ಥ ದೊರೆಯುತ್ತದೆ.

**ಅಸ್ಪೃಶ್ಯತೆ ವಿರೋಧ:** ಗಾಂಧೀಜಿ ಅವರ ಅಸ್ಪೃಶ್ಯತೆಯನ್ನು ಸಾಮಾಜಿಕ ಅನ್ಯಾಯವೆಂದು ಪರಿಗಣಿಸಿ ಅದರ ವಿರುದ್ಧ ಸಾರ್ವಜನಿಕವಾಗಿ ಹೋರಾಡಿದರು. ದೇವಾಲಯ ಪ್ರವೇಶ, ಸ್ವಚ್ಛತೆ, ಶಿಕ್ಷಣ ಮತ್ತು ಸಾಮಾಜಿಕ ಗೌರವದಂತಹ ಕ್ಷೇತ್ರಗಳಲ್ಲಿ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟ ಜನಸಮುದಾಯಗಳ ಸ್ಥಿತಿಯನ್ನು ಸುಧಾರಿಸಲು ಅವರು ಹಲವು ಚಳವಳಿಗಳನ್ನು ನಡೆಸಿದರು. ಆದರೆ ಜಾತಿ ವ್ಯವಸ್ಥೆಯ ಕುರಿತು ಗಾಂಧೀಜಿ ಅವರ ವಿವಿಧ ಹಂತಗಳ ನಿಲುವುಗಳಲ್ಲಿ ಬದಲಾವಣೆ ಕಂಡುಬರುತ್ತದೆ. ಇದೇ ವಿಷಯವು ಅಂಬೇಡ್ಕರ್ ಅವರೊಂದಿಗೆ ಅವರ ವೈಚಾರಿಕ ಭಿನ್ನಾಭಿಪ್ರಾಯದ ಪ್ರಮುಖ ಕ್ಷೇತ್ರವಾಗಿತ್ತು.

**ಅಂಬೇಡ್ಕರ್ ಅವರ ಪರಿಕಲ್ಪನೆಯ ರಾಷ್ಟ್ರ ನಿರ್ಮಾಣ**

**ಸಾಮಾಜಿಕ ನ್ಯಾಯ ಮತ್ತು ಸಮಾನತೆ:** ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ರಾಜಕೀಯ ಸ್ವಾತಂತ್ರ್ಯ ಮಾತ್ರ ರಾಷ್ಟ್ರ ನಿರ್ಮಾಣಕ್ಕೆ ಸಾಕಾಗುವುದಿಲ್ಲ. ಸಮಾಜದಲ್ಲಿ ಜಾತಿ ಆಧಾರಿತ ಅಸಮಾನತೆ ಮುಂದುವರಿದರೆ ಸ್ವಾತಂತ್ರ್ಯದ ಫಲ ಎಲ್ಲರಿಗೂ ಸಮಾನವಾಗಿ ದೊರೆಯುವುದಿಲ್ಲ ಎಂಬುದು ಅವರ ಪ್ರಮುಖ ವಾದವಾಗಿತ್ತು. ಅವರ ರಾಷ್ಟ್ರ ನಿರ್ಮಾಣದ ಚಿಂತನೆಯ ಕೇಂದ್ರದಲ್ಲಿ ಸ್ವಾತಂತ್ರ್ಯತೆ, ಸಮಾನತೆ ಮತ್ತು ಭ್ರಾತೃತ್ವ ಎಂಬ ಜೀವಪರ ಮತ್ತು ಮಾನವಪರ ಮೌಲ್ಯಗಳಿದ್ದವು. ಈ ಮೂರು ಮೌಲ್ಯಗಳ ಸಮತೋಲನವೇ ನಿಜವಾದ ಪ್ರಜಾಪ್ರಭುತ್ವದ ಆಧಾರವೆಂದು ಅವರು ಪ್ರತಿಪಾದಿಸಿದರು.

**ಜಾತಿ ನಿರ್ಮೂಲನೆ:** ಅಂಬೇಡ್ಕರ್ ಅವರ ರಾಷ್ಟ್ರ ನಿರ್ಮಾಣದ ಚಿಂತನೆಯ ಅತ್ಯಂತ ಪ್ರಮುಖ ಆಯಾಮವೆಂದರೆ; ಜಾತಿ ವ್ಯವಸ್ಥೆಯ ವಿಮರ್ಶೆಯಾಗಿತ್ತು. ಜಾತಿ ವ್ಯವಸ್ಥೆಯು ಭಾರತೀಯ ಸಮಾಜವನ್ನು ವಿಭಜಿಸುವುದಷ್ಟೇ ಅಲ್ಲದೆ, ಮಾನವ ಗೌರವ ಮತ್ತು ಸಾಮಾಜಿಕ ಚಲನೆಯನ್ನೂ ನಿರ್ಬಂಧಿಸುತ್ತದೆ ಎಂಬುದು ಅವರ ವಿಶ್ಲೇಷಣೆಯ ಕೇಂದ್ರವಾಗಿತ್ತು. *Annihilation of Caste* ಎಂಬ ಕೃತಿಯಲ್ಲಿ ಅವರು ಜಾತಿ ವ್ಯವಸ್ಥೆಯ ಸಾಮಾಜಿಕ ಮತ್ತು ಧಾರ್ಮಿಕ ನೆಲೆಗಳನ್ನು ವಿಮರ್ಶಿಸಿದರು. ಅವರ ಪ್ರಕಾರ ಸಮಾನ ನಾಗರಿಕತ್ವವನ್ನು ನಿರ್ಮಿಸದೆ ನಿಜವಾದ ರಾಷ್ಟ್ರ ಭಾವನೆ ರೂಪುಗೊಳ್ಳುವುದು ಕಷ್ಟವಾಗಿರುತ್ತದೆ.

**ಸಾಂವಿಧಾನಾತ್ಮಕ ರಾಷ್ಟ್ರ ನಿರ್ಮಾಣ:** ಭಾರತದ ಸಂವಿಧಾನ ರಚನಾ ಪ್ರಕ್ರಿಯೆಯಲ್ಲಿ ಅಂಬೇಡ್ಕರ್ ಅವರ ಪಾತ್ರವೂ ರಾಷ್ಟ್ರ ನಿರ್ಮಾಣದ ದೃಷ್ಟಿಯಿಂದಲೂ ಕೂಡ ಅತ್ಯಂತ ಮಹತ್ವದ್ದಾಗಿರುತ್ತದೆ. ಸಂವಿಧಾನವು ವ್ಯಕ್ತಿಯ ಮೂಲಭೂತ ಹಕ್ಕುಗಳು, ಸಮಾನತೆ, ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ಆಡಳಿತಕ್ಕೆ ಸಂಸ್ಥಾತ್ಮಕ ಆಧಾರವನ್ನು ಒದಗಿಸಿತು. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸಂವಿಧಾನವು ಕೇವಲ ಆಡಳಿತದ ನಿಯಮಗಳ ಸಂಗ್ರಹವಲ್ಲ. ಅದು ಸಾಮಾಜಿಕ ಪರಿವರ್ತನೆಗೆ ಒಂದು

ಸಾಧನವಾಗಬೇಕಾಗಿತ್ತು. ಅದರಲ್ಲಿಯೂ ವಿಶೇಷವಾಗಿ ಹಿಂದುಳಿದ ಜನಸಮುದಾಯಗಳಿಗೆ ಕಾನೂನುಬದ್ಧ ರಕ್ಷಣೆ ಮತ್ತು ರಾಜಕೀಯ ಪ್ರಾತಿನಿಧ್ಯ ಕಲ್ಪಿಸುವುದು ಅವರ ರಾಷ್ಟ್ರ ನಿರ್ಮಾಣದ ದೃಷ್ಟಿಕೋನದ ಪ್ರಮುಖ ಭಾಗವಾಗಿತ್ತು.

**ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಪ್ರಜಾಪ್ರಭುತ್ವ:** ಅಂಬೇಡ್ಕರ್ ಅವರು ರಾಜಕೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ ಪ್ರಜಾಪ್ರಭುತ್ವದೊಂದಿಗೆ ಸಂಬಂಧಿಸಿದರು. ಮತದಾನದ ಹಕ್ಕು ಇದ್ದರೂ ಸಾಮಾಜಿಕ ಬದುಕಿನಲ್ಲಿ ಸಮಾನತೆ ಇಲ್ಲದಿದ್ದರೆ ಪ್ರಜಾಪ್ರಭುತ್ವದ ಅರ್ಥ ಅಪೂರ್ಣವಾಗುತ್ತದೆ ಎಂಬುದು ಅವರ ಚಿಂತನೆಯ ಮೂಲಭೂತ ಅಂಶವಾಗಿತ್ತು. ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವು ಕೇವಲ ಸರ್ಕಾರ ರಚಿಸುವ ವಿಧಾನವಲ್ಲ; ಅದು ಸಮಾಜದಲ್ಲಿ ಪರಸ್ಪರ ಗೌರವ, ಸಮಾನ ಅವಕಾಶ ಮತ್ತು ಭ್ರಾತೃತ್ವವನ್ನು ಬೆಳೆಸುವ ಜೀವನ ವಿಧಾನವೂ ಆಗಿದೆ.

**ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ರಾಷ್ಟ್ರ ನಿರ್ಮಾಣದ ತುಲನಾತ್ಮಕ ದೃಷ್ಟಿಕೋನ**

ಭಾರತ ದೇಶದ ರಾಷ್ಟ್ರ ನಿರ್ಮಾಣವನ್ನು ಕುರಿತು ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಸಮಗ್ರ ಚಿಂತನೆಗಳಲ್ಲಿಯೂ ಸಾಮಾಜಿಕ ಪರಿವರ್ತನೆ, ಮಾನವ ಕಲ್ಯಾಣ ಮತ್ತು ನ್ಯಾಯಯುತ ಸಮಾಜ ನಿರ್ಮಾಣದ ಆಶಯಗಳು ಕಂಡುಬಂದರೂ, ಅವುಗಳನ್ನು ಸಾಧಿಸುವ ವಿಧಾನ, ಆದ್ಯತೆ ಮತ್ತು ಸಂಸ್ಥಾತ್ಮಕ ದೃಷ್ಟಿಕೋನಗಳಲ್ಲಿ ಗಮನಾರ್ಹ ವ್ಯತ್ಯಾಸಗಳಿರುವುದು ಗೋಚರಿಸುತ್ತದೆ. ಗಾಂಧೀಜಿ ಅವರ ರಾಷ್ಟ್ರ ನಿರ್ಮಾಣದ ಪರಿಕಲ್ಪನೆಯು ಸ್ವರಾಜ್ಯ, ಸತ್ಯ, ಅಹಿಂಸೆ, ಸರ್ವೋದಯ, ಗ್ರಾಮ–ಸ್ವರಾಜ್ಯ, ಸ್ವಾವಲಂಬನೆ ಮತ್ತು ನೈತಿಕ ಪುನರ್‌ನಿರ್ಮಾಣದ ಮೇಲೆ ಕೇಂದ್ರೀಕೃತವಾಗಿದ್ದರೆ, ಅಂಬೇಡ್ಕರ್ ಅವರ ಚಿಂತನೆಯು ಸಾಮಾಜಿಕ ನ್ಯಾಯ, ಸಮಾನತೆ, ವೈಯಕ್ತಿಕ ಸ್ವಾತಂತ್ರ್ಯ, ಭ್ರಾತೃತ್ವ, ಸಾಂವಿಧಾನಾತ್ಮಕ ಪ್ರಜಾಪ್ರಭುತ್ವ ಮತ್ತು ಕಾನೂನುಬದ್ಧ ಹಕ್ಕುಗಳ ಮೇಲೆ ಹೆಚ್ಚು ಒತ್ತು ನೀಡುತ್ತದೆ. ಈ ತುಲನಾತ್ಮಕ ಪರಿಶೀಲನೆಯಿಂದ ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ರಾಷ್ಟ್ರ ನಿರ್ಮಾಣದ ಚಿಂತನೆಗಳಲ್ಲಿ ಸಾಮ್ಯತೆ ಮತ್ತು ಭಿನ್ನತೆ ಎರಡೂ ಇದ್ದವು ಎಂಬುದು ಸ್ಪಷ್ಟವಾಗುತ್ತದೆ. ಇಬ್ಬರೂ ಮಾನವ ಗೌರವ, ಸಾಮಾಜಿಕ ಪರಿವರ್ತನೆ ಮತ್ತು ಶೋಷಣೆಯ ನಿವಾರಣೆಯ ಅಗತ್ಯವನ್ನು ಒಪ್ಪಿಕೊಂಡಿದ್ದರೂ, ಸಾಮಾಜಿಕ ಪರಿವರ್ತನೆಯನ್ನು ಸಾಧಿಸುವ ಮಾರ್ಗದಲ್ಲಿ ಅವರ ನಿಲುವುಗಳು ವಿಭಿನ್ನವಾಗಿದ್ದವು. ಗಾಂಧೀಜಿ ಅವರ ಸಮಾಜದ ನೈತಿಕ ಪುನರ್‌ನಿರ್ಮಾಣ ಮತ್ತು ಜನಚಳವಳಿಯ ಮೂಲಕ ಪರಿವರ್ತನೆಗೆ ಒತ್ತು ನೀಡಿದರೆ, ಅಂಬೇಡ್ಕರ್ ಅವರು ಸಾಂವಿಧಾನಾತ್ಮಕ ಹಕ್ಕುಗಳು, ಕಾನೂನುಬದ್ಧ ರಕ್ಷಣೆ ಮತ್ತು ಸಂಸ್ಥಾತ್ಮಕ ಬದಲಾವಣೆಯ ಮೂಲಕ ಸಾಮಾಜಿಕ ನ್ಯಾಯವನ್ನು ಸಾಧಿಸುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು. ಅದರಲ್ಲಿಯೂ ವಿಶೇಷವಾಗಿ ಜಾತಿ ಪ್ರಶ್ನೆ ಇವರಿಬ್ಬರ ನಡುವಿನ ವೈಚಾರಿಕ ಭಿನ್ನತೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಗಾಂಧೀಜಿ ಅವರು ಅಸ್ಪೃಶ್ಯತೆಯ ನಿರ್ಮೂಲನೆಗೆ ಪ್ರಬಲವಾಗಿ ಒತ್ತು ನೀಡಿದರೆ,

ಅಂಬೇಡ್ಕರ್ ಅವರು ಜಾತಿ ವ್ಯವಸ್ಥೆಯ ಸಾಮಾಜಿಕ ರಚನೆಯನ್ನೇ ಮೂಲಭೂತವಾಗಿ ಪ್ರಶ್ನಿಸಿ ಜಾತಿ ನಿರ್ಮೂಲನೆಯ ಅಗತ್ಯವನ್ನು ಪ್ರತಿಪಾದಿಸಿದರು. ಇದೇ ರೀತಿ, ಗ್ರಾಮ–ಸ್ವರಾಜ್ಯದ ಮೂಲಕ ವಿಕೇಂದ್ರೀಕರಣಕ್ಕೆ ಗಾಂಧೀಜಿ ಅವರು ನೀಡಿದ ಒತ್ತು ಮತ್ತು ಸಮಾನ ನಾಗರಿಕತ್ವ, ವೈಯಕ್ತಿಕ ಹಕ್ಕುಗಳು ಹಾಗೂ ಸಾಂವಿಧಾನಾತ್ಮಕ ರಕ್ಷಣೆಗೆ ಅಂಬೇಡ್ಕರ್ ಅವರು ನೀಡಿದ ಆದ್ಯತೆ ಇವರ ರಾಷ್ಟ್ರ ನಿರ್ಮಾಣದ ಪರಿಕಲ್ಪನೆಗಳ ನಡುವಿನ ಪ್ರಮುಖ ವ್ಯತ್ಯಾಸವನ್ನು ಸೂಚಿಸುತ್ತದೆ.

ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ನಡುವಿನ ಅತ್ಯಂತ ಪ್ರಮುಖ ವೈಚಾರಿಕ ಭಿನ್ನಾಭಿಪ್ರಾಯವು ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಪ್ರಶ್ನೆಗೆ ಸಂಬಂಧಿಸಿರುತ್ತದೆ. ಗಾಂಧೀಜಿ ಅವರು ಅಸ್ಪೃಶ್ಯತೆಯ ನಿರ್ಮೂಲನೆಗೆ ಬಲವಾದ ಒತ್ತು ನೀಡಿದರೂ, ಜಾತಿ ವ್ಯವಸ್ಥೆಯ ಕುರಿತು ಅವರ ನಿಲುವು ಕಾಲಾನುಕ್ರಮದಲ್ಲಿ ಬದಲಾಗುತ್ತಾ ಬಂದಿತು. ಇದಕ್ಕೆ ವಿರುದ್ಧವಾಗಿ ಅಂಬೇಡ್ಕರ್ ಅವರು ಜಾತಿ ವ್ಯವಸ್ಥೆಯ ಮೂಲಭೂತ ರಚನೆಯನ್ನೇ ಪ್ರಶ್ನಿಸಿದರು. ಅವರ ಪ್ರಕಾರ ಅಸ್ಪೃಶ್ಯತೆಯನ್ನು ಮಾತ್ರ ನಿವಾರಿಸುವುದರಿಂದ ಸಾಮಾಜಿಕ ಸಮಾನತೆ ಸಾಧ್ಯವಾಗುವುದಿಲ್ಲ; ಜಾತಿಯ ಆಧಾರದ ಮೇಲೆ ನಿರ್ಮಿತ ಸಾಮಾಜಿಕ ಶ್ರೇಣೀಕರಣವನ್ನು ನಿರ್ಮೂಲನೆ ಮಾಡಬೇಕಾಗುತ್ತದೆ. ಇಲ್ಲಿ ಇಬ್ಬರ ರಾಷ್ಟ್ರ ನಿರ್ಮಾಣದ ಮಾರ್ಗಗಳ ನಡುವಿನ ಮೂಲಭೂತ ವ್ಯತ್ಯಾಸ ಗೋಚರಿಸುತ್ತದೆ. ಗಾಂಧೀಜಿ ಅವರು ಸಮಾಜೋ–ನೈತಿಕ ಪರಿವರ್ತನೆಗೆ ಒತ್ತು ನೀಡಿದರೆ, ಅಂಬೇಡ್ಕರ್ ಅವರು ಸಾಮಾಜಿಕ ರಚನೆಯ ಕಾನೂನುಬದ್ಧ ಮತ್ತು ಸಂಸ್ಥಾತ್ಮಕ ಪರಿವರ್ತನೆಗೆ ಹೆಚ್ಚಿನ ಮಹತ್ವ ನೀಡಿದರು.

ಗಾಂಧೀಜಿ ಅವರ ಆರ್ಥಿಕ ಚಿಂತನೆಯು ಸಣ್ಣ ಪ್ರಮಾಣದ ಉತ್ಪಾದನೆ, ಗ್ರಾಮೀಣ ಆರ್ಥಿಕತೆ, ಸ್ವದೇಶಿ, ಸ್ವಾವಲಂಬನೆ ಮತ್ತು ಟ್ರಸ್ಟಿಶಿಪ್‌ನಂತಹ ಪರಿಕಲ್ಪನೆಗಳ ಸುತ್ತ ರೂಪುಗೊಂಡಿತ್ತು. ಸಂಪತ್ತು ಸಮಾಜದ ಹೊಣೆಗಾರಿಕೆಗೆ ಒಳಪಟ್ಟಿರಬೇಕು ಮತ್ತು ಆರ್ಥಿಕ ಚಟುವಟಿಕೆಗಳು ಮಾನವ ಕಲ್ಯಾಣಕ್ಕೆ ಸೇವೆ ಸಲ್ಲಿಸಬೇಕು ಎಂಬುದು ಅವರ ಆಶಯವಾಗಿತ್ತು. ಅಂಬೇಡ್ಕರ್ ಅವರ ಆರ್ಥಿಕ ಚಿಂತನೆಯು ಕೈಗಾರಿಕೀಕರಣ, ಕಾರ್ಮಿಕರ ಹಕ್ಕುಗಳು, ರಾಜ್ಯದ ಆರ್ಥಿಕ ಪಾತ್ರ, ಭೂಸಂಬಂಧಗಳ ಸುಧಾರಣೆ ಮತ್ತು ಆರ್ಥಿಕ ಪ್ರಜಾಪ್ರಭುತ್ವದ ಪ್ರಶ್ನೆಗಳತ್ತ ಹೆಚ್ಚು ಗಮನ ಹರಿಸಿತು. ಆರ್ಥಿಕ ಅವಕಾಶಗಳ ಅಸಮಾನತೆಯು ಸಾಮಾಜಿಕ ಅಸಮಾನತೆಯನ್ನು ಮತ್ತಷ್ಟು ಗಂಭೀರಗೊಳಿಸಬಹುದು ಎಂಬುದನ್ನು ಅವರು ಗುರುತಿಸಿದ್ದರು.

ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರು, ದಲಿತರು, ಕಾರ್ಮಿಕರು ಮತ್ತು ಇತರ ಅಂಚಿನ ಜನಸಮುದಾಯಗಳ ಪಾಲ್ಗೊಳ್ಳುವಿಕೆಗೆ ಇಬ್ಬರೂ ಮಹತ್ವ ನೀಡಿದರು. ಗಾಂಧೀಜಿ ಅವರ ಸ್ವಾತಂತ್ರ್ಯ ಚಳವಳಿಯಲ್ಲಿ ಮಹಿಳೆಯರು ವ್ಯಾಪಕವಾಗಿ ಪಾಲ್ಗೊಳ್ಳುವ ಅವಕಾಶ ಪಡೆದರು. ಸತ್ಯಾಗ್ರಹ ಮತ್ತು ಅಹಿಂಸಾತ್ಮಕ ಚಳವಳಿಗಳು ರಾಜಕೀಯ ಚಟುವಟಿಕೆಯಲ್ಲಿ ಸಾಮಾನ್ಯ ಜನರ ಪಾಲ್ಗೊಳ್ಳುವಿಕೆಗೆ ಅವಕಾಶ

ಕಲ್ಪಿಸಿದವು. ಅಂಬೇಡ್ಕರ್ ಅವರು ಮಹಿಳೆಯರ ಶಿಕ್ಷಣ, ಆಸ್ತಿ ಹಕ್ಕು, ವಿವಾಹ ಮತ್ತು ಕುಟುಂಬ ಕಾನೂನುಗಳಲ್ಲಿ ಸಮಾನತೆ ಸೇರಿದಂತೆ ವಿವಿಧ ಹಕ್ಕುಗಳ ಪರವಾಗಿ ನಿಂತರು. ವಿಶೇಷವಾಗಿ ಹಿಂದೂ ಸಂಹಿತೆ ಮಸೂದೆಯನ್ನು ಕುರಿತ ಅವರ ಪ್ರಯತ್ನಗಳು ಮಹಿಳಾ ಹಕ್ಕುಗಳ ಪ್ರಶ್ನೆಯನ್ನು ಕಾನೂನು ಮತ್ತು ಸಾಮಾಜಿಕ ಸುಧಾರಣೆಯೊಂದಿಗೆ ಜೋಡಿಸಿದವು.

ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ರಾಷ್ಟ್ರ ನಿರ್ಮಾಣದ ಚಿಂತನೆಗಳನ್ನು ಪರಸ್ಪರ ವಿರೋಧಿ ಚೌಕಟ್ಟಿನಲ್ಲಿ ಮಾತ್ರ ನೋಡುವುದು ಅವರ ಚಿಂತನೆಯ ವ್ಯಾಪ್ತಿಯನ್ನು ಸೀಮಿತಗೊಳಿಸುತ್ತದೆ. ಇಬ್ಬರ ನಡುವೆ ತೀವ್ರ ವೈಚಾರಿಕ ಭಿನ್ನಾಭಿಪ್ರಾಯಗಳಿದ್ದರೂ, ಭಾರತೀಯ ಸಮಾಜದ ಪರಿವರ್ತನೆ ಮತ್ತು ಮಾನವ ಗೌರವದ ಪ್ರಶ್ನೆ ಇಬ್ಬರ ಚಿಂತನೆಯಲ್ಲಿಯೂ ಪ್ರಮುಖವಾಗಿತ್ತು. ಗಾಂಧೀಜಿ ಅವರ ಕೊಡುಗೆಯ ಪ್ರಮುಖ ಆಯಾಮವೆಂದರೆ; ರಾಷ್ಟ್ರ ನಿರ್ಮಾಣವನ್ನು ಜನಸಾಮಾನ್ಯರ ರಾಜಕೀಯ ಪಾಲ್ಗೊಳ್ಳುವಿಕೆಯೊಂದಿಗೆ ಸಂಪರ್ಕಿಸಿದ್ದು. ಅಹಿಂಸಾತ್ಮಕ ಪ್ರತಿರೋಧ, ಸತ್ಯಾಗ್ರಹ, ಸ್ವದೇಶಿ ಮತ್ತು ಸ್ವರಾಜ್ಯದ ಮೂಲಕ ಅವರು ಸ್ವಾತಂತ್ರ್ಯ ಚಳವಳಿಗೆ ವಿಶಾಲ ಸಾಮಾಜಿಕ ನೆಲೆಯನ್ನು ರೂಪಿಸಿದರು. ಅಂಬೇಡ್ಕರ್ ಅವರ ಮಹತ್ವವು ರಾಷ್ಟ್ರ ನಿರ್ಮಾಣದ ಪ್ರಶ್ನೆಗೆ ಸಾಮಾಜಿಕ ನ್ಯಾಯ ಮತ್ತು ಸಾಂವಿಧಾನಾತ್ಮಕ ಹಕ್ಕುಗಳನ್ನು ಕೇಂದ್ರಬಿಂದುವಾಗಿ ತಂದದ್ದರಲ್ಲಿ ಕಂಡುಬರುತ್ತದೆ. ರಾಜಕೀಯ ಪ್ರಜಾಪ್ರಭುತ್ವವು ಸಾಮಾಜಿಕ ಸಮಾನತೆಯಿಲ್ಲದೆ ಸ್ಥಿರವಾಗಲು ಸಾಧ್ಯವಿಲ್ಲ ಎಂಬ ಅವರ ಎಚ್ಚರಿಕೆ ಭಾರತೀಯ ಪ್ರಜಾಪ್ರಭುತ್ವದ ಅಧ್ಯಯನದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಆದಾಗ್ಯೂ, ಇಬ್ಬರ ವಿಧಾನಗಳಲ್ಲಿಯೂ ವಿಮರ್ಶೆಗೆ ಅವಕಾಶವಿದೆ. ಗಾಂಧೀಜಿ ಅವರ ಗ್ರಾಮಕೇಂದ್ರಿತ ಆರ್ಥಿಕ ಮಾದರಿ ಆಧುನಿಕ ಕೈಗಾರಿಕಾ ಅಭಿವೃದ್ಧಿ, ನಗರೀಕರಣ ಮತ್ತು ತಾಂತ್ರಿಕ ಬದಲಾವಣೆಗಳ ಪ್ರಶ್ನೆಗಳನ್ನು ಸಂಪೂರ್ಣವಾಗಿ ಪರಿಹರಿಸುವುದಿಲ್ಲ ಎಂಬ ಚರ್ಚೆಯಿದೆ. ಮತ್ತೊಂದೆಡೆ, ಅಂಬೇಡ್ಕರ್ ಅವರ ಸಾಂವಿಧಾನಾತ್ಮಕ ಮತ್ತು ರಾಜ್ಯ ಕೇಂದ್ರಿತ ಸಾಮಾಜಿಕ ಪರಿವರ್ತನೆಯ ವಿಧಾನವು ಸಾಮಾಜಿಕ ಸಂಬಂಧಗಳ ಆಂತರಿಕ ನೈತಿಕ ಪರಿವರ್ತನೆಯ ಅಗತ್ಯವನ್ನು ಸಂಪೂರ್ಣವಾಗಿ ಬದಲಾಯಿಸಲು ಸಾಧ್ಯವಿಲ್ಲ.

ಇಂದಿನ ಭಾರತದಲ್ಲಿ ಸಾಮಾಜಿಕ ಅಸಮಾನತೆ, ಜಾತಿ ಆಧಾರಿತ ತಾರತಮ್ಯ, ಆರ್ಥಿಕ ಅಸಮಾನತೆ, ಧಾರ್ಮಿಕ ಸೌಹಾರ್ದ, ಗ್ರಾಮೀಣ ಅಭಿವೃದ್ಧಿ, ಮಹಿಳಾ ಸಬಲೀಕರಣ, ಪರಿಸರ ಸಂರಕ್ಷಣೆ ಮತ್ತು ಪ್ರಜಾಪ್ರಭುತ್ವದ ಗುಣಮಟ್ಟದಂತಹ ಪ್ರಶ್ನೆಗಳು ರಾಷ್ಟ್ರ ನಿರ್ಮಾಣದೊಂದಿಗೆ ಸಂಬಂಧ ಹೊಂದಿವೆ. ಈ ಹಿನ್ನೆಲೆಯಲ್ಲಿ ಗಾಂಧೀಜಿ ಅವರ ಸತ್ಯ, ಅಹಿಂಸೆ, ಸ್ವರಾಜ್ಯ, ಸರ್ವೋದಯ, ಸ್ವಾವಲಂಬನೆ ಮತ್ತು ಜನಸಹಭಾಗಿತ್ವದ ಪರಿಕಲ್ಪನೆಗಳು ಒಂದು ರೀತಿಯ ಸಮಾಜೋ–ನೈತಿಕತೆಯ ಚೌಕಟ್ಟನ್ನು ಒದಗಿಸುತ್ತವೆ. ಅಂಬೇಡ್ಕರ್ ಅವರ ಸಮಾನತೆ, ಸಾಮಾಜಿಕ ನ್ಯಾಯ, ಸಾಂವಿಧಾನಾತ್ಮಕತೆ, ಮೂಲಭೂತ ಹಕ್ಕುಗಳು,

ಭ್ರಾತೃತ್ವ ಮತ್ತು ಪ್ರಜಾಪ್ರಭುತ್ವದ ಚಿಂತನೆಗಳು ಮತ್ತೊಂದು ಸಂಸ್ಥಾತ್ಮಕ–ರಾಜಕೀಯ ಚೌಕಟ್ಟನ್ನು ಒದಗಿಸುತ್ತವೆ. ಆದ್ದರಿಂದ ಸಮಕಾಲೀನ ರಾಷ್ಟ್ರ ನಿರ್ಮಾಣದ ಚರ್ಚೆಯಲ್ಲಿ ಇವರಿಬ್ಬರ ಚಿಂತನೆಗಳನ್ನು ಕೇವಲ ಐತಿಹಾಸಿಕ ಪರಂಪರೆಯಾಗಿ ನೋಡುವ ಬದಲು, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವದ ನಿರಂತರ ಸವಾಲುಗಳನ್ನು ಅರ್ಥೈಸಲು ಬಳಸಬಹುದಾದ ವೈಚಾರಿಕ ಸಂಪನ್ಮೂಲಗಳಾಗಿ ಪರಿಗಣಿಸಬಹುದು.

**ಉಪಸಂಹಾರ:** ಭಾರತ ದೇಶದ ಇತಿಹಾಸದಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ಪಾತ್ರಗಳು ವಿಭಿನ್ನವಾಗಿದ್ದರೂ, ಭಾರತೀಯ ಸಮಾಜದ ಪರಿವರ್ತನೆಯ ಇತಿಹಾಸದಲ್ಲಿ ಅವು ಪರಸ್ಪರ ಸಂಬಂಧಿತವಾದ ಮಹತ್ವವನ್ನು ಹೊಂದಿವೆ. ಗಾಂಧೀಜಿ ಅವರ ರಾಷ್ಟ್ರ ನಿರ್ಮಾಣವನ್ನು ಸ್ವರಾಜ್ಯ, ಸತ್ಯ, ಅಹಿಂಸೆ, ಸರ್ವೋದಯ, ಗ್ರಾಮಸ್ವರಾಜ್ಯ ಮತ್ತು ನೈತಿಕ ರಾಜಕೀಯದ ಮೂಲಕ ಜನಜೀವನದೊಂದಿಗೆ ಸಂಪರ್ಕಿಸಿದರೆ, ಅಂಬೇಡ್ಕರ್ ಅವರ ರಾಷ್ಟ್ರ ನಿರ್ಮಾಣದ ಕೇಂದ್ರದಲ್ಲಿ ಸಾಮಾಜಿಕ ನ್ಯಾಯ, ಸಮಾನತೆ, ವೈಯಕ್ತಿಕ ಸ್ವಾತಂತ್ರ್ಯ, ಭ್ರಾತೃತ್ವ ಮತ್ತು ಸಾಂವಿಧಾನಾತ್ಮಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದರು. ಗಾಂಧೀಜಿ ಅವರ ದೃಷ್ಟಿಯಲ್ಲಿ ಸ್ವಾತಂತ್ರ್ಯವು ಜನರ ನೈತಿಕ ಮತ್ತು ಸಾಮಾಜಿಕ ಸಬಲೀಕರಣದೊಂದಿಗೆ ಸಂಬಂಧಿಸಿದ್ದರೆ, ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸ್ವಾತಂತ್ರ್ಯವು ಸಾಮಾಜಿಕ ಸಮಾನತೆ ಮತ್ತು ಕಾನೂನುಬದ್ಧ ಹಕ್ಕುಗಳೊಂದಿಗೆ ಅರ್ಥಪೂರ್ಣವಾಗುತ್ತದೆ. ಜಾತಿ ಪ್ರಶ್ನೆಯಲ್ಲಿ ಇವರಿಬ್ಬರ ನಡುವೆ ಕಂಡುಬರುವ ವೈಚಾರಿಕ ಸಂಘರ್ಷವು ಭಾರತೀಯ ರಾಷ್ಟ್ರ ನಿರ್ಮಾಣದ ಸಂಕೀರ್ಣತೆಯನ್ನು ಅರ್ಥೈಸಲು ಅತ್ಯಂತ ಮಹತ್ವದ್ದಾಗಿದೆ. ಭಾರತದ ರಾಷ್ಟ್ರ ನಿರ್ಮಾಣವನ್ನು ಕೇವಲ ರಾಜಕೀಯ ಸ್ವಾತಂತ್ರ್ಯದ ಸಾಧನೆಯಾಗಿ ನೋಡುವುದಕ್ಕಿಂತ ಸಾಮಾಜಿಕ ನ್ಯಾಯ, ಸಮಾನ ನಾಗರಿಕತ್ವ, ಪ್ರಜಾಪ್ರಭುತ್ವ, ನೈತಿಕತೆ ಮತ್ತು ಮಾನವ ಗೌರವಗಳ ನಿರಂತರ ನಿರ್ಮಾಣದ ಪ್ರಕ್ರಿಯೆಯಾಗಿ ಅರ್ಥೈಸುವುದು ಸೂಕ್ತವಾಗಿದೆ. ಈ ದೃಷ್ಟಿಯಿಂದ ಗಾಂಧೀಜಿ ಅವರ ನೈತಿಕ–ಜನಾಧಾರಿತ ರಾಷ್ಟ್ರ ನಿರ್ಮಾಣದ ಚಿಂತನೆ ಮತ್ತು ಅಂಬೇಡ್ಕರ್ ಅವರ ಸಾಂವಿಧಾನಾತ್ಮಕ ಸಾಮಾಜಿಕ ನ್ಯಾಯದ ಚಿಂತನೆಗಳು ಭಾರತೀಯ ರಾಷ್ಟ್ರ ನಿರ್ಮಾಣದ ಎರಡು ಪ್ರಮುಖ ವೈಚಾರಿಕ ಆಯಾಮಗಳನ್ನು ಪ್ರತಿನಿಧಿಸುತ್ತವೆ.

**ಉಲ್ಲೇಖಿತ ಗ್ರಂಥಗಳು**


- **ಡಾಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು,** ಸಂಪುಟ–01–22, 2015
- ಚಂದ್ರಶೇಖರ್.ಎಸ್, ***ಗಾಂಧೀ ಮತ್ತು ಅಂಬೇಡ್ಕರ್,*** ಆದರ್ಶ ಪ್ರಕಾಶನ, ಸಾಗರ, 1992
- ಚಂದ್ರಶೇಖರಪ್ಪ.ಜಿ.ಟಿ, ***ಭಾರತದ ಇತಿಹಾಸ*** (ಕ್ರಿ.ಶ.1526–1964) ಪೂರ್ಣ ಪ್ರಕಾಶನ, ಶಿವಮೊಗ್ಗ, 2003
- ತುಕಾರಾಮ್.ಎಸ್, ***ಲೋಕಶಿಕ್ಷಣ (ಗಾಂಧೀ, ಅಂಬೇಡ್ಕರ್ ಮತ್ತು ಫ್ರೆಯರೆಯವರ ತಾತ್ವಿಕ ನೆಲೆಗಟ್ಟಿನಲ್ಲಿ ಕರ್ನಾಟಕ ಸಾಕ್ಷರತಾ ಆಂದೋಲನ),*** ರೂಪ ಪ್ರಕಾಶ, ಮೈಸೂರು, 2012
- ಪುನ್ನೆಪ್ಪ.ಎಸ್.ಮಾಳ್ಗೆ, ***ಬಸವೇಶ್ವರ ಮತ್ತು ಅಂಬೇಡ್ಕರ್ ಅವರ ರಾಜಕೀಯ ಚಿಂತನೆಗಳಲ್ಲಿ ಸಾಮಾಜಿಕ ನ್ಯಾಯ,*** ರಾಜ್ ಪ್ರಕಾಶನ, ಮೈಸೂರು, 2004
- Austin, Granville. The Indian Constitution: Cornerstone of a Nation. Oxford University Press, 1966
- Gandhi, M. K. An Autobiography: The Story of My Experiments with Truth. Navajivan Publishing House, 1927
- Gandhi, M. K. Harijan
- Gandhi, M. K. Hind Swaraj. Navajivan Publishing House, 1938
- Guha, Ramachandra. India After Gandhi: The History of the World's Largest Democracy. Macmillan, 2007
- Keer, Dhananjay. Dr. Ambedkar: Life and Mission. Popular Prakashan, 1990
- Omvedt, Gail. Ambedkar: Towards an Enlightened India. Penguin Books, 2004